ವಿಶಾಖ ಎನ್.

# ಸೋನಂ ಸ್ಪೆಷಲ್ ಸ್ಟೇಟ್‌ಮೆಂಟ್



ಸೋನಂ ಕಪೂರ್ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ಚಿತ್ರ

ಗುಲಾಬಿ, ಬಂಗಾರದ ಬಣ್ಣ ಬೆರೆತ ರವಿಕೆ, ಅದಕ್ಕೆ ಹೊಂದುವ ಲೆಹೆಂಗಾ ತೊಟ್ಟಿದ್ದರು ಸೋನಂ ಕಪೂರ್. ಹೊಸ ವರ್ಷದಲ್ಲಿ ಅವರು ಹೀಗೆ ಸಿಂಗರಗೊಂಡಿದ್ದು ಫೋಟೊಶೂಟ್‌ಗೆ. ತಮ್ಮನ್ನು ತಾವು ಮರುಶೋಧಿಸಿಕೊಳ್ಳಲು ಇಂತಹ ಸಂಭ್ರಮಗಳು ಇರಬೇಕೆಂದು ಭಾವಿಸಿದವರ ಪೈಕಿ ಸೋನಂ. ಅಲಂಕೃತಗೊಂಡ ತಮ್ಮದೇ ಫೋಟೊಗಳನ್ನು ಇನ್‌ಸ್ಟಾಗ್ರಾಂನಲ್ಲಿ ಹಾಕಿಕೊಂಡ ಅವರು, 'ಮಹಿಳೆಯಾಗಿರುವುದಕ್ಕೆ ಹೆಮ್ಮೆ ಇದೆ' ಎಂಬರ್ಥದ ಒಕ್ಕಣೆಯನ್ನೂ ಬರೆದರು.

ಮಗ ವಾಯು ಕಪೂರ್ ಅಹುಜಾ ನಗುವನ್ನು ನೇವರಿಸುತ್ತಿರುವ ಸೋನಂ, ಇನ್‌ಸ್ಟಾಗ್ರಾಂನಲ್ಲಿ ಮಾಡಿರುವ ಪೋಸ್ಟ್‌ಗಳಲ್ಲಿ ಒಂದು ಸ್ಟೇಟ್‌ಮೆಂಟ್ ಕೂಡ ಇತ್ತು.

2022ರಲ್ಲಿ ಸೋನಂ ತಾಯಿಯಾದ ಮೇಲೆ ತಮ್ಮ ಹಳೆಯ ದೇಹಾಕಾರ ಪಡೆದುಕೊಂಡು, ಹಿಂದಿನ ಸ್ಥಿತಿಗೆ ಮರಳಲು 16 ವಾರಗಳು ಬೇಕಾದವು. ಯಾವುದೇ ಕ್ರ್ಯಾಷ್ ಡಯೆಟ್ ಕೋರ್ಸ್ ಮಾಡದೆ, ಜಿಮ್‌ನಲ್ಲಿ ವಿಪರೀತ ಬೆವರು ಹರಿಸದೆ ಅವರು ಮತ್ತೆ ನಾಯಕಿಗೆ ಇರುವಂತಹದ್ದೇ ದೇಹಾಕಾರ ಪಡೆದುಕೊಂಡಿರುವುದಕ್ಕೆ ಅವರ ಫೋಟೊಗಳು ಕನ್ನಡಿ ಹಿಡಿಯುತ್ತವೆ. ಅಷ್ಟೇ ಅಲ್ಲ, ಅವರ ಫ್ಯಾಷನ್ ಸ್ಟೇಟ್‌ಮೆಂಟ್ ಕೂಡ ಅವುಗಳಲ್ಲಿ ಇದೆ. ಚೆಂದವಾಗಿ ಅಲಂಕಾರ ಮಾಡಿಕೊಳ್ಳುವ ನಾಜೂಕು ನಟಿಯರ ಸಾಲಿನಲ್ಲಿ ಸೋನಂ ಕೂಡ ಪ್ರಮುಖರು. ಅವರ ಫ್ಯಾಷನ್ ಅಭಿರುಚಿಯನ್ನು ವಾರಗೆಯ ಎಷ್ಟೋ ಮಂದಿ ಕೊಂಡಾಡುತ್ತಾರೆ. 2018ರಲ್ಲಿ ಆನಂದ್ ಅಹುಜಾ ಅವರನ್ನು ಮದುವೆಯಾದ ನಂತರ ಸೋನಂ ಅಭಿನಯಿಸಿದ ಸಿನಿಮಾಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಶೋಮ್ ಮಖಿಜಾ ನಿರ್ದೇಶನದ 'ಬ್ಲೈಂಡ್' ಚಿತ್ರದಲ್ಲಿ ಅವರು ನಟಿಸಿದ್ದರು. ಅದು ಕಳೆದ ವರ್ಷ ತೆರೆಕಂಡಿತ್ತು. ಅದಕ್ಕೂ ಮೊದಲು ಅವರು 2020ರಲ್ಲಿ ತೆರೆಕಂಡಿದ್ದ 'ಎಕೆ ವರ್ಸಸ್ ಎಕೆ' ಸಿನಿಮಾದಲ್ಲಿ ತಮ್ಮದೇ ಬದುಕಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.

ಸೋನಂ ಕಪೂರ್ ಹಾಕಿರುವ ಪೋಸ್ಟ್‌ಗಳಿಗೆ ಅನೇಕರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಕೆಲವರು ಅವರ ಸೌಂದರ್ಯವನ್ನು ಹೊಗಳಿದರೆ, ಅನೇಕರು ಅವರು ಹೆಣ್ಣಾಗಿ ಹೆಮ್ಮೆಪಟ್ಟಿರುವುದನ್ನು ಮೆಚ್ಚಿಕೊಂಡಿದ್ದಾರೆ.

ಕೆಲವೇ ದಿನಗಳ ಹಿಂದೆ ಲಂಡನ್‌ನಲ್ಲಿ ತಮ್ಮ ಮಗುವಿನ ಜೊತೆ ಕಿಟಕಿ ಬಳಿ ನಿಂತು ತಾವೂ ಮಗುವಾಗಿಯೇ ಹೊರಗಿನ ದೃಶ್ಯಗಳನ್ನು ಸೋನಂ ಆಸ್ವಾದಿಸಿದ್ದರು. ಅದನ್ನು ಆನಂದ್ ಅಹುಜಾ ಚಿತ್ರೀಕರಿಸಿ, ವಿಡಿಯೊವನ್ನು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಾಕಿದ್ದರು. ಸೋನಂ ಈಗ ಹಳೆಯ ಸ್ಥಿತಿಗೆ ಮರಳಿರುವುದಷ್ಟೇ ಅಲ್ಲ, ಎರಡು ಸಿನಿಮಾಗಳಿಗೂ ಸಹಿ ಹಾಕಿದ್ದಾರೆ. ಹೀಗಾಗಿ ಅವರ ಪುನರಾಗಮನಕ್ಕೀಗ ಕಾಲ ಕೂಡಿಬಂದಿದೆ ಎನ್ನಬೇಕು.




## ಕಮಲ್, ಮಣಿರತ್ನಂ ಮಾಡುವರೇ ಕಮಾಲ್?

ಕಮಲ ಹಾಸನ್ ನಾಯಕ. ಮಣಿರತ್ನಂ ನಿರ್ದೇಶಕ. ಎ.ಆರ್. ರೆಹಮಾನ್ ಸ್ವರ ಸಂಯೋಜನೆ – ಇಂಥದೊಂದು ಕಾಂಬಿನೇಷನ್ ಕೇಳಿ ಈಗ ಕಣ್ಣರಳಿಸುವ ಪಾಳಿ ಚಿತ್ರರಸಿಕರದ್ದು. ಈ ಮೂವರೂ ಒಟ್ಟಾಗಿ ಕೆಲಸ ಶುರುಹಚ್ಚಿಕೊಂಡಿರುವ ಸಿನಿಮಾದ ಹೆಸರು 'ಥಗ್ ಲೈಫ್'. ಅದರ ಶೀರ್ಷಿಕೆ ಅನಾವರಣದ ವಿಡಿಯೊ ಮೊನ್ನೆಯಷ್ಟೆ ಬಿಡುಗಡೆಯಾಯಿತು.

ಉದಯನಿಧಿ ಸ್ಟಾಲಿನ್ ಅವರ ರೆಡ್ ಜೈಂಟ್ ಮೂವೀಸ್, ಕಮಲ್ ಹಾಸನ್ ಅವರ ರಾಜ್ ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಹಾಗೂ ಮಣಿರತ್ನಂ ಅವರ ಮದ್ರಾಸ್ ಟಾಕೀಸ್ ನಿರ್ಮಾಣ ಸಂಸ್ಥೆಗಳು ಸೇರಿ ಈ ಚಿತ್ರಕ್ಕೆ ಬಂಡವಾಳ ಹೂಡಿವೆ.

ಬಟಾಬಯಲಿನಲ್ಲಿ ಗೋಣಿತಾಟಿನಂತಹ ವಸ್ತ್ರವನ್ನು ಶಿರದವರೆಗೆ ಹೊದ್ದು ನಿಂತ ವ್ಯಕ್ತಿಯನ್ನು ಕ್ಯಾಮೆರಾ ಹಿಂದಿನಿಂದ ತೋರುತ್ತದೆ. ದೂಳು ಏಳುತ್ತಿರುವ ವಾತಾವರಣದಲ್ಲಿ ದೂರದಲ್ಲಿ ಐವರು ವಿವಿಧ ಆಯುಧಗಳನ್ನು ಹಿಡಿದು ನಿಂತಿರುತ್ತಾರೆ. ನಿಧಾನ ಅವರು ಈ ವ್ಯಕ್ತಿಯತ್ತ ಧಾವಿಸಿ ಬರುತ್ತಾರೆ. ಆಗ ಹೊದ್ದ ವಸ್ತ್ರವನ್ನು ತೆರೆಯುವ ವ್ಯಕ್ತಿ ತನ್ನನ್ನು 'ರಂಗರಾಯ ಶಕ್ತಿವೇಲ್ ನಾಯಕರ್' ಎಂದು ಪರಿಚಯಿಸಿಕೊಳ್ಳುತ್ತಾನೆ. ಆ ವ್ಯಕ್ತಿಯೇ ಕಮಲ್ ಹಾಸನ್. ರಾಜಾಮೀಸೆ, ತುಂಬು ಗಡ್ಡ, ಕಣ್ಣಲ್ಲಿ ಕ್ರೋಧದ ನಡುವೆಯೂ ಬೆರೆತ ತುಂಟತನ. ಬರುವವರನ್ನು ಹೊಡೆದು, ಕೊನೆಯಲ್ಲಿ ಮತ್ತೆ ತನ್ನ ಹೆಸರನ್ನು ನೆನಪಿಟ್ಟುಕೊಳ್ಳುವಂತೆ ಹೇಳುವ ಕುತೂಹಲಕಾರಿ ಶೀರ್ಷಿಕೆಯ ಟೀಸರ್ ಮೊನ್ನೆ ಬಿಡುಗಡೆಯಾಯಿತು. ಜಯಂ ರವಿ, ದುಲ್ಕರ್ ಸಲ್ಮಾನ್ ಕೂಡ ಈ ಚಿತ್ರದಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಲಿದ್ದಾರೆ.

ಕಳೆದ ವರ್ಷ ಮಣಿರತ್ನಂ ನಿರ್ದೇಶನದ 'ಪೊನ್ನಿಯನ್ ಸೆಲ್ವನ್2' ಉತ್ತಮ ಗಳಿಕೆ ಮಾಡಿದ ಚಿತ್ರಗಳ ಸಾಲಿಗೆ ಸೇರಿತ್ತು.